ಇಂದು ದಿಃ **24-09-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಕೆ ವಕೀಲರಿಂದ 19 ಮತ್ತು 20 ನೇ ಪ್ರತಿವಾದಿಗಳ ಪರ:**

ನಾನು ನನ್ನ ವಾದ ಪತ್ರದಲ್ಲಿ ಅಸಲು ದಾವಾ ನಂಬರ್-14/2002 ಈ ದಾವೆ ಹಾಕುವ ಮೊದಲು ದಾಖಲಾದ ಬಗ್ಗೆ ತಿಳಿಸಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇದೆ. ನಾನು ಅಸಲು ದಾವಾ ನಂಬರ್-14/2002 ರ ದಾಖಲೆಗಳನ್ನು ತೆಗಿಸಿ ನೋಡಲಿಲ್ಲ. ಈ ದಾವೆ ಸಲ್ಲಿಸುವ ಮೊದಲು ಯಾವಾಗ ಅಸಲು ದಾವಾ ನಂಬರ್-14/2002 ರ ಬಗ್ಗೆ ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿ 10 ವರ್ಷಗಳ ಮೊದಲು ಗೊತ್ತಾಯಿತು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ಏನು ತೀರ್ಪು ಆಗಿದೆ ಎಂದು ನಾನು ದಾಖಲೆ ತೆಗಿಸಿ ನೋಡಲಿಲ್ಲ. ಆ ದಾವೆಯನ್ನು ಪರುಶುರಾಮಪ್ಪ ನನ್ನ ತಾಯಿ ಮತ್ತು ಇತರರ ವಿರುದ್ಧ ಹಾಕಿದ್ದನು. ನನ್ನ ಉಳಿದ ಸಹೋದರರ ವಿರುದ್ಧ ಹಾಕಿದ್ದನು. ದಾವಾ ಜಮೀನು ಸರ್ವೆ ನಂಬರ್-68 ರಲ್ಲಿ ಇದ್ದು, ಅದು 4 ಎಕರೆ ಮುಕ್ಕಾಲು ಗುಂಟೆ ಇರುತ್ತದೆ. ಪ್ರತಿವಾದಿ 19 ಮತ್ತು 20 ಪೂರ್ಣ ಜಮೀನನ್ನು ಖರೀದಿ ಮಾಡಿರುತ್ತಾರೆ. ಈ ಜಮೀನು ನನ್ನ ತಂದೆ ಎಲ್ಲಪ್ಪ ಖಂಡಾರೆ ಈತನಿಗೆ ಭೂನ್ಯಾಯಮಂಡಳಿಯಿಂದ ಮಂಜೂರು ಆಗಿತ್ತು ಎಂದರೆ ಸರಿ. ಅಸಲು ದಾವಾ ನಂಬರ್-14/2002 ನ್ನು ಮೊದಲು ಪರುಶುರಾಮ ಎಲ್ಲಿ ದಾಖಲು ಮಾಡಿದ್ದರು ಮತ್ತು ಮೂಲ ಅಸಲು ದಾವಾ ನಂಬರ್ ಏನು ಇತ್ತು ನಿಮಗೆ

ಗೊತ್ತಾ ಎಂದರೆ ಸಾಕ್ಷಿ ಹರಿಹರದಲ್ಲಿ ಹಾಕಿದ್ದರು ಎಂದು ಹೇಳುತ್ತಾರೆ. ಅಸಲು ದಾವಾ ನಂಬರ್-54/1996 ಇದನ್ನು ಪರುಶುರಾಮಪ್ಪ ದಾವಣಗೆರೆಯ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದನು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ದಾಖಲು ಮಾಡಿದ ದಾವೆಯ ಬಗ್ಗೆ ನನಗೆ ಗೊತ್ತಾಗಿತ್ತು. ಸಾಕ್ಷಿ ಆದರೆ ರಾಜೀ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. 1996 ರಲ್ಲಿ ದಾವಾಣಗೆರೆಯ ನ್ಯಾಯಾಲಯದಲ್ಲಿ ದಾಖಲಾದ ನಂತರ ದಿನಾಂಕಃ04-08-2002 ರವರೆಗೆ ಹರಿಹರದಲ್ಲಿ ನ್ಯಾಯಾಲಯ ಸ್ಥಾಪನೆಯಾಗುವವರೆಗೂ ಆ ದಾವೆ ದಾವಣಗೆರೆಯ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆ 33 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಿನಾಂಕಃ16-03-1989 ರಂದು ನನ್ನ ತಂದೆ ತೀರಿಕೊಂಡರು ಎಂದರೆ ಇರಬಹುದು. ಆ ದಾವೆಯಲ್ಲಿ 2 ನೇ ಪ್ರತಿವಾದಿ ದಿನಾಂಕಃ12-01-1993 ರಂದು ನಾವು ಈಗಾಗಲೇ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದೇವೆ ಎಂದರೆ ಗೊತ್ತಿಲ್ಲ. ಸದರಿ ದಾವೆ ಎಷ್ಟು ವರ್ಷ ನಡೆಯಿತು ಎಂದು ಗೊತ್ತಿಲ್ಲ. 1996 ರಲ್ಲಿ ದಾವೆ ದಾಖಲಾದ ನಂತರ ಆ ದಾವೆ ಹರಿಹರದ ನ್ಯಾಯಾಲಯಕ್ಕೆ ವರ್ಗಾವಣೆಯಾದ ನಂತರ ಮತ್ತು ಅಸಲು ದಾವಾ ನಂಬರ್-14/2002 ಚಾಲ್ತಿಯಲ್ಲಿದ್ದಾಗ ನಾವು ಅದರ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿ ಮತ್ತು ನನ ಉಳಿದ ಸಹೋದರರು 1993 ರಲ್ಲಿ ಆದ ಪಾಲುವಿಭಾಗವನ್ನು ಒಪ್ಪಿ, ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ರಾಜೀ ಮಾಡಿಕೊಂಡರು ಎಂದರೆ ಗೊತ್ತಿಲ್ಲ. ರಾಜೀ ಡಿಕ್ರಿ ಮಾಡಿಕೊಂಡ ಬಗ್ಗೆ ಗೊತ್ತಿದೆ. ರಾಜೀ

ಪ್ರಕಾರ ನನ್ನ ಸಹೋದರರು ಅವರವರ ಹಿಸ್ಸೆಗಳಿಗೆ ಖಾತೆ ಮಾಡಿಸಿಕೊಂಡರು ಎಂದರೆ ಸರಿ. ಸಾಕ್ಷಿ ನಮಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಾಜೀ ಡಿಕ್ರಿಯ ನಂತರ 2008 ರವರೆಗೆ ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ನನ್ನ ಸಹೋದರರು ಮತ್ತು ತಾಯಿ ತಾವು ಅನುಭವಿಸುತ್ತಾ ಬಂದರು ಎಂದರೆ ಸರಿ. ಆ ಮಧ್ಯ ನನ್ನ ಸಹೋದರು ಬಾಬು ತೀರಿಕೊಂಡನು ಎಂದರೆ ಸರಿ. 4 ನೇ ಪ್ರತಿವಾದಿ ಬಾಬು ಈತನ ಹೆಂಡತಿ ಎಂದರೆ ಸರಿ. ಹರಿಹರದಲ್ಲಿ ಈ ಹಿಂದೆ ಹೆಚ್ ಶಿವಪ್ಪ ಎನ್ನುವವರು ಎಂ.ಎಲ್.ಎ ಮತ್ತು ಸಚೀವ ಆಗಿದ್ದರು ಎಂದರೆ ಸರಿ. 2008 ರಲ್ಲಿ ಶಿವಪ್ಪ ಎನ್ನುವವರಿಗೆ ನನ್ನ ತಾಯಿ ಮತ್ತು ಸಹೋದರರು ದಾವಾ ಆಸ್ತಿ ಐಟಂ ನಂಬರ್-1 ನ್ನು ಮಾರಾಟ ಮಾಡಲು ಅಧಿಕಾರ ಪತ್ರ ಕೊಟ್ಟಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನಾನು ನಿ.ಪಿ-4 ರಿಂದ 8 ಕ್ರಯಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಏನು ದಾಖಲೆ ಹಾಕಿದ್ದೇನೆ ಎಂದು ನನಗೆ ಗೊತ್ತಿದೆ. ನಿ.ಪಿ-4 ರಿಂದ 8 ನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿ.ಪಿ-4 ರಿಂದ 8 ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಈ ದಾಖಲೆಗಳನ್ನು ಅವುಗಳ ಬಗ್ಗೆ ಗೊತ್ತಿಲ್ಲದೇ ಹಾಕಿದ್ದೀರಾ ಎಂದರೆ ಸಾಕ್ಷಿ ಗೊತ್ತಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿ.ಪಿ-4 ನ್ನು ಓದಿ ಅದರಲ್ಲಿ ನನ್ನ ತಾಯಿ ಸದರಿ ಶಿವಪ್ಪ ಇವರಿಗೆ ಅಧಿಕಾರಪತ್ರ ಬರೆದುಕೊಟ್ಟ ಬಗ್ಗೆ ನಮೂದು ಇದೆ ಎಂದರೆ ಗೊತ್ತಿಲ್ಲ. ದಿನಾಂಕಃ13-08-2008 ರಂದು ಈ ಕ್ರಯಪತ್ರ ಆಗಿದ್ದು, ಅದರ ಸುಮಾರು 3 ತಿಂಗಳ ಮೊದಲು ನಮಗೆ ಈ ವ್ಯವಹಾರದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿ 5 ತಿಂಗಳ ಮೊದಲು ಗೊತ್ತಿತ್ತು ಎಂದು ಹೇಳುತ್ತಾರೆ.

ಗೊತ್ತಾದ ನಂತರ ನೀವೇನಾದರೂ ಸಾರ್ವಜನಿಕ ನೋಟೀಸ್ ಅಥವಾ ವ್ಯಾಜ್ಯ ಸದರಿ ವ್ಯವಹಾರವನ್ನು ತಡೆಯಲು ಪ್ರಯತ್ನ ಮಾಡಿದೀರಾ ಎಂದರೆ ಸಾಕ್ಷಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ತಕರಾರು ಕೊಟ್ಟಿದ್ದೇವು ಎಂದು ಹೇಳುತ್ತಾರೆ. ಹೊಲ ಮಾರುವ ಮೊದಲು ತಕರಾರು ಅರ್ಜಿ ಕೊಟ್ಟಿದ್ದೇವು. ಹರಿಹರದ ಸಬ್ ರಿಜೀಸ್ಟರ್ ಕಚೇರಿಯಲ್ಲಿ 5-6 ತಿಂಗಳ ಮೊದಲು ಕೊಟ್ಟಿದ್ದೇವು. ಈ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈ ಕುರಿತು ಯಾವುದೇ ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಈ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಕರಾರು ಸಲ್ಲಿಸಿದ ಬಗ್ಗೆ ತಿಳಿಸುವ ಪ್ರಯತ್ನ ಮಾಡಿದ್ದೇನೆ. ನಾನು ಆ ರೀತಿ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ 19 ಮತ್ತು 20 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.